**ಹಾನಗಲ್‌ನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆರ್ ನ್ಯಾಯಿಕ ದಂಡಧಿಕಾರಿಗಳರವರ ನ್ಯಾಯಾಲಯದಲ್ಲಿ, ಹಾನಗಲ್**

**ಉಪಸ್ಥಿತರುಃ** ಶ್ರೀಮತಿ ಫಕೀರವ್ವ ಕೆಳಗೇರಿ, *ಬಿ.ಎ.,ಎಲ್ ಎಲ್ ಬಿ.*

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹಾನಗಲ್.

**ಅಸಲ ದಾವಾ ನಂ.202/2018**

**ದಿನಾಂಕಃ 19 ನೇ ಡಿಸೆಂಬರ್ 2019**

ವಾದಿ : ಯಲ್ಲಪ್ಪ ತಂದೆ ತಿಪ್ಪಣ್ಣ ಗಾಜಿಪೂರ ಊರ್ಫ್ ಚಲವಾದಿ.

(ವಕೀಲರಾದ ಶ್ರೀ ಆರ್.ವಿ.ಡಬ್ಲ್ಯೂ, ಇವರಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ)

**ವಿರುದ್ಧ**

ಪ್ರತಿವಾದಿಯರು : ಬಸವರಾಜ ತಂದೆ ಕರಿಯಪ್ಪ ಕಾಳಿ ಹಾಗೂ ಇತರರು.

(ಪ್ರತಿವಾದಿ ನಂ.1 ರಿಂದ 7,9 ಮತ್ತು 11 ನೇದವರಿಗೆ ವಕೀಲರಾದ ಶ್ರೀ ಎಫ್.ಬಿ.ಎಂ ಇವರಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ)
(ಪ್ರತಿವಾದಿ ನಂ.8 ಮತ್ತು 10 ನೇದವರು ಏಕತರ್ಫಿಯಾಗಿರುತ್ತಾರೆ)

**ಮಧ್ಯಂತರ ಅರ್ಜಿ ಸಂಖ್ಯೆ-1**

ಅರ್ಜಿದಾರ/ವಾದಿ: ಯಲ್ಲಪ್ಪ ತಂದೆ ತಿಪ್ಪಣ್ಣ ಗಾಜಿಪೂರ ಊರ್ಫ್ ಚಲವಾದಿ.

**ವಿರುದ್ಧ**

ಎದುರುದಾರರು : ಬಸವರಾಜ ತಂದೆ ಕರಿಯಪ್ಪ ಕಾಳಿ ಹಾಗೂ ಇತರರು.

**ಮಧ್ಯಂತರ ಅರ್ಜಿ ಸಂಖ್ಯೆ-1 ಕ್ಕೆ ಆದೇಶ**

ವಾದಿ/ಅರ್ಜಿದಾರ ತನ್ನ ಪ್ರಮಾಣಪತ್ರದಲ್ಲಿ ಹೇಳುವುದೇನೆಂದರೆ ಪ್ರತಿವಾದಿಯರಾಗಲೀ ಅವರ ತರ್ಪಿ ಇನ್ನಾರೇ ಆಗಲಿ ವಾದಿಯ ದಾವಾದಾಸ್ತಿಯಾದ ಹಾನಗಲ್ ಶಹರದ ಚಲವಾದಿ ಓಣಿ ಆಸ್ತಿ ಟಿಎಂಸಿ ನಂ.2608 ಮನೆ ವ ಖುಲ್ಲಾ ಜಾಗೆ ಇದ್ದು, ಅದರ ಅಳತೆ ಪೂರ್ವ - ಪಶ್ಚಿಮಕ್ಕೆ 45 (ಉತ್ತರಕ್ಕೆ), ಉತ್ತರ - ದಕ್ಷಿಣಕ್ಕೆ 115 (ಪಶ್ಚಿಮಕ್ಕೆ), ಪೂರ್ವ - ಪಶ್ಚಿಮಕ್ಕೆ (ದಕ್ಷಿಣಕ್ಕೆ), ಉತ್ತರ - ದಕ್ಷಿಣಕ್ಕೆ 91 (ಪೂರ್ವಕ್ಕೆ) ಇದ್ದು, ಸದರಿ ಆಸ್ತಿಯ ಪೂರ್ವಕ್ಕೆ ರಸ್ತೆ ಹಾಗೂ ಸಮೂದಾಯ ಭವನ,

ಪಶ್ಚಿಮಕ್ಕೆ ಆಸ್ತಿ ನಂ.2604, ಉತ್ತರಕ್ಕೆ ಆಸ್ತಿ ನಂ.2609 ಸಮೂದಾಯ ಭವನ, ದಕ್ಷಿಣಕ್ಕೆ ಹಿಂದಿನ ಗುತ್ತೆಮ್ಮ ದೇವಿ ದೇವಸ್ಥಾನದ ಜಾಗೆ ಇದ್ದು, ಸದರಿ ಆಸ್ತಿಯ ವಾದಿಯ ಶಾಂತಯುತ ಕಬ್ಜಾ ವಹಿವಾಟಿಗೆ ಅಡ್ಡಿ ಆತಂಕ ಪಡಿಸದಂತೆ ಪ್ರಸುತ್ತ ದಾವಾ ನಿಖಾಲಿವಾಗುವವರೆಗೆ ತಾತ್ಪೂರ್ತಿಕ ನಿರ್ಭಂದಕಾಜ್ಞೆಯನ್ನು ನೀಡುವಂತೆ ಪ್ರಾರ್ಥಿಸಿರುತ್ತಾರೆ.

2. ಅರ್ಜಿದಾರ/ವಾದಿಯು ತನ್ನ ಅರ್ಜಿಯ ಜೊತೆಗೆ ಇಟ್ಟಿರುವ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯರು ದಾವಾದಾಸ್ತಿಯ ಉತ್ತರಕ್ಕಿರುವ ಸಮೂದಾಯ ಭವನದ ಟ್ರಸ್ಟಿನ ಪದಾಧಿಕಾರಿಯಾಗಿರುತ್ತಾರೆ. ವಾದಿಯ ಮಾಲ್ಕಿ ಕಬ್ಜೆ ಆಸ್ತಿಯಾದ ಟಿಎಂಸಿ ನಂ.2608 ಇದ್ದು ಮೊದಲು ಪೂರ್ವ – ಪಶ್ಚಿಮಕ್ಕೆ 75, ಉತ್ತರ – ದಕ್ಷಿಣಕ್ಕೆ 120, ಪಶ್ಚಿಮಕ್ಕೆ 115 ಅಡಿ ಕ್ಷೇತ್ರ ಇದ್ದು ಅದರಲ್ಲಿ ವಾದಿಯ ಉತ್ತರ ಭಾಗದ 24 (ಉತ್ತರ - ದಕ್ಷಿಣ), ಪೂರ್ವ– ಪಶ್ಚಿಮ 30 ಅಡಿ ಜಾಗೆಯನ್ನು ವಾದಿಯ ಸಮೂದಾಯದ ಜನರ ಒಳತಿಗಾಗಿ ಸರಕಾರದಿಂದ ನಿರ್ಮಿಸಿದ ಸಮೂದಾಯ ಭವನಕ್ಕೆ ಕೊಟ್ಟಿದ್ದು ಇರುತ್ತದೆ. ಆದ್ದರಿಂದ ಸದರಿ ಕ್ಷೇತ್ರದಲ್ಲಿ ಆಗಲೀ ಅಥವಾ ಸಮೂದಾಯದಲ್ಲಾಗಲೀ ವಾದಿಗಾಗಲೀ ಅಥವಾ ಪ್ರತಿವಾದಿಗಾಗಲಿ ಯಾವುದೇ ವೈಯಕ್ತಿಕ ಹಕ್ಕು ಹಿತಾಸಕ್ತಿ ಇರುವುದಿಲ್ಲ. ಮುಂದುವರೆದು ವಾದಿಯು ಹೇಳುವುದೇನೆಂದರೆ ಪ್ರತಿವಾದಿಯರುಗಳು ತಮಗೆ ಸಮೂದಾಯ ಭವನಕ್ಕೆ ಸೋಮಣ್ಣ ಬಸವಣ್ಣೆಪ್ಪ ಚಲವಾದಿ ಅನ್ನುವವರು ಕೊಟ್ಟಿರುವುದಾಗಿ ಆಧರಿಸಿ ವಾದಿಯ ಮಾಲ್ಕಿ ಕಬ್ಜಾ ಆಸ್ತಿಯ ಪಶ್ಚಿಮ ಭಾಗದ ಕೆಲ ಕ್ಷೇತ್ರವನ್ನು ಅತೀಕ್ರಮಿಸುವ ತಯಾರಿ ನಡೆಸಿದ್ದಲ್ಲದೇ ವಾದಿಗೆ ಸರಕಾರದ ಸೌಲಭ್ಯದಿಂದ ಮನೆ ನಿರ್ಮಿಸುತ್ತಿರುವ ಕೆಲಸಕ್ಕೆ ಹಾಗೂ ಶಾಂತಯುತವಾಗಿ ದಾವಾ ಶೆಡ್ಯೂಲ ಸ್ವತ್ತನ್ನು ವಹಿವಾಟಿಸಲು ಅಡ್ಡಿ ಆತಂಕ ಪಡಿಸುತ್ತಿದ್ದು, ಈಗಾಗಲೇ ವಾದಿಯು ಆತನ ಮೇಲೆ ಅಸಲು ದಾವಾ ನಂ.68/2001 ನೇದ್ದನ್ನು ದಾಖಲುಪಡಿಸಿ ಡಿಕ್ರಿ ಪಡೆದುಕೊಂಡಿರುತ್ತಾನೆ. ಆದರೂ ಸಹಿತ ಪ್ರತಿವಾದಿಯರು ದಾವಾದಾಸ್ತಿಯಲ್ಲಿನ ವಾದಿಯ ಶಾಂತಿಯುತ ಕಬ್ಜಾ ವಹಿವಾಟಿಗೆ ಅಡ್ಡಿಪಡಿಸುತ್ತಿದ್ದುದರಿಂದ ಈ ದಾವೆಯನ್ನು ದಾಖಲುಪಡಿಸಿ ಮತ್ತು ಈ ಮಧ್ಯಂತರ ಅರ್ಜಿಯ ಮೂಲಕ ಪ್ರತಿವಾದಿಯರಾಗಲೀ ಅಥವಾ ಅವರ ಅವರ ತರ್ಫೆ ಯಾರೇ ವಾದಿಯರ ದಾವಾ ಆಸ್ತಿಯ ಶಾಂತಿಯುತ ಕಬ್ಜಾ ವಹಿವುವಾಟಿಗೆ ಅಡ್ಡಿ ಆತಂಕ ಪಡಿಸದಂತೆ ಸದರಿ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ತಾಕೀದಿ ಹುಕುಂ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಪ್ರತಿವಾದಿಯರು ನಂ.1 ರಿಂದ 7 ಮತ್ತು 9, 11 ತಮ್ಮ ವಕಿಲೀರ ಮೂಲಕ ಹಾಜರಾಗಿದ್ಧು, ಸಾಕಷ್ಟು ಸಮಯಾವಕಾಶ ನೀಡಿದರೂ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ.

3. ವಾದವನ್ನು ಆಲಿಸಿರುತ್ತೇನೆ. ದಾಖಲೆಗಳನ್ನು ಪರಿಶೀಲಿಸಿದ್ದೇನೆ. ನನ್ನ ಪರಿಗಣನೆಗೆ ಈ ಕೆಳಗಿನಂತೆ ಅಂಶಗಳು ಉದ್ಭವಿಸುತ್ತವೆ.

1. ಅರ್ಜಿದಾರ/ವಾದಿಯು ತನ್ನ ಪರವಾಗಿ ಮೇಲ್ನೋಟಕ್ಕೆ ಉತ್ತಮವಾದ ಕೇಸು ಇದೆಯೆಂದು ತೋರಿಸಿ ಕೊಡುವರೇ?

2. ಅರ್ಜಿದಾರ/ವಾದಿಯು ತನ್ನ ಪರವಾಗಿ ಅನುಕೂಲತೆಯ ಸಂತುಲನೆ ಇದೆಯೆಂದು ತೋರಿಸಿ ಕೊಡುವರೇ?

3. ಅರ್ಜಿದಾರ/ವಾದಿಯು ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡದೆ ಇದ್ದರೆ ತನಗೆ ತುಂಬಲಾರದ ನಷ್ಟ, ಕಷ್ಟ ಮತ್ತು ತೊಂದರೆ ಉಂಟಾಗುತ್ತದೆ ಎಂದು ತೋರಿಸಿ ಕೊಡುವರೆ?

4. ಯಾವ ಆದೇಶ?

4. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆ.

ಅಂಶ ನಂ.1 ರಿಂದ 3 ಃ ಸಕಾರಾತ್ಮಕವಾಗಿ

ಅಂಶ ನಂ.4 ಃ ಅಂತಿಮ ಆದೇಶದಂತೆ ಈ ಕೆಳಗಿನ ಕಾರಣಗಳಿಗಾಗಿಃ

## <u>ಕಾರಣಗಳು</u>

**5**. **<u>ಅಂಶ ನಂ.1 ರಿಂದ 3</u>**ಃ ಸದರಿ ಅಂಶಗಳು ಒಂದಕ್ಕೊಂದು ಅಂತರ ಸಂಬಂಧವನ್ನು ಹೊಂದಿರುವುದರಿಂದ ಮತ್ತು ಸಂಗತಿಗಳ ಪುನರಾವರ್ತನೆಯಾಗುವುದನ್ನು ತಡೆಯಲು ಅವುಗಳನ್ನು ಒಟ್ಟಿಗೆ ಚರ್ಚಿಸಲಾಗಿದೆ.

6. ವಾದಿಯು ಮೇಲ್ನೋಟಕ್ಕೆ ತನ್ನ ಪ್ರಕರಣವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಹಾನಗಲ್ ಶಹರದ ಟಿಎಂಸಿ ನಂ.2608 ಮತ್ತು 2609 ನೇದ್ದವುಗಳಿಗೆ ಸಂಬಂಧಿಸಿದ ಎರಡು ಉತಾರೆಗಳನ್ನು ಮತ್ತು ವಾಜಪೆಯಿ ನಗರ ವಸತಿ ಯೋಜನೆಯಡಿಯಲ್ಲಿ ದಾವಾದಾಸ್ತಿಯಲ್ಲಿ ಮನೆ ಮಂಜೂರಾದ ಕುರಿತು ಪುರಸಭೆಯವರಿಂದ ನೀಡಿದ ಮಂಜೂರಾತಿ ಪತ್ರವನ್ನು ಹಾಜರುಪಡಿಸಿರುತ್ತಾರೆ. ಮತ್ತು ರಿಜನಲ್ ಡೈರೆಕ್ಟರ (ಸೌತ್) ಕರ್ನಾಟಕ ಇವರಿಂದ ಕಟ್ಟಡ ನಿರ್ಮಾಣ ಮಾಡಲು ಮುಚ್ಚಳಿಕೆ ಪತ್ರ ಬರೆದುಕೊಡುವ ಕುರಿತು ಫಾರ್ಮ ನಂ.4 ನ್ನು ನೀಡಿದ ಕುರಿತು ದಾಖಲೆಯನ್ನು ಹಾಜರುಪಡಿಸಿರುತ್ತಾರೆ. ವಾದಿಯು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಟಿಎಂಸಿ ನಂ.2608 ನೇದ್ದಕ್ಕೆ ಸಂಬಂಧಿಸಿದ ಉತಾರೆಯನ್ನು ಪರಿಶೀಲಿಸಿದಾಗ ಸದರಿ ಆಸ್ತಿಯು ವಾದಿಯ ಹೆಸರಿನಲ್ಲಿರುವುದು ಕಂಡುಬರುತ್ತದೆ. ಸದರಿ ಆಸ್ತಿಯ ಭೂ ವಿಸ್ತೀರ್ಣ 24 x 200 ಒಟ್ಟು 4800 ಚ.ಫೂಟ, ಕಟ್ಟಡ ವಿಸ್ತೀರ್ಣ 24 x 34 ಒಟ್ಟು 680 ಚ.ಫೂಟ ಇರುವುದು ಕಂಡುಬರುತ್ತದೆ. ಅದರಂತೆ ಟಿಎಂ ಆಸ್ತಿ ನಂ.2609 ನೇದ್ದಕ್ಕೆ ಸಂಭಧಿಸಿದ ಪುರಸಭೆ ಉತಾರೆಯನ್ನು ಪರಿಶೀಲಿಸಿದಾಗ, ಜ್ಞಾನ ಮಂದಿರ ಗುತ್ತೆಮನ ಗುಡಿ ಪಂಚರು ಅಂತಾ ದಾಖಲಾಗಿರುವುದು, ಮತ್ತು ಸದರಿ ಆಸ್ತಿಯ ಭೂ ವಿಸ್ತೀರ್ಣ 33 x 38 ಒಟ್ಟು 1254 ಚ.ಫೂಟ ಖುಲ್ಲಾ ಜಾಗೆ ಇರುವುದು ಕಂಡುಬರುತ್ತದೆ.

7. ವಾದಿಯ ಪ್ರಕಾರ ದಾವಾದಾಸ್ತಿಯು ಮನೆ ವ ಖುಲ್ಲಾ ಜಾಗೆ ಇದ್ದು, ಅದರ ಅಳತೆ ಪೂರ್ವ – ಪಶ್ಚಿಮಕ್ಕೆ 45 (ಉತ್ತರಕ್ಕೆ), ಉತ್ತರ – ದಕ್ಷಿಣಕ್ಕೆ 115 (ಪಶ್ಚಿಮಕ್ಕೆ), ಪೂರ್ವ – ಪಶ್ಚಿಮಕ್ಕೆ (ದಕ್ಷಿಣಕ್ಕೆ), ಉತ್ತರ – ದಕ್ಷಿಣಕ್ಕೆ 91 (ಪೂರ್ವಕ್ಕೆ) ಇದ್ದು, ಸದರಿ ಆಸ್ತಿಯ ಪೂರ್ವಕ್ಕೆ ರಸ್ತೆ ಹಾಗೂ ಸಮೂದಾಯ ಭವನ, ಪಶ್ಚಿಮಕ್ಕೆ ಆಸ್ತಿ ನಂ.2604, ಉತ್ತರಕ್ಕೆ ಆಸ್ತಿ ನಂ.2609 ಸಮೂದಾಯ ಭವನ, ದಕ್ಷಿಣಕ್ಕೆ ಹಿಂದಿನ ಗುತ್ತೆಮ್ಮ ದೇವಿ ದೇವಸ್ಥಾನದ ಜಾಗೆ ಇರುತ್ತದೆ ಎನ್ನುವುದಾಗಿದೆ. ಸದರಿ ಅರ್ಜಿಗೆ ಪ್ರತಿವಾದಿಯರು ತಮ್ಮ ಪರವಾಗಿ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ. ವಾದಿಯ ಪ್ರಕಾರ ಪುರಸಭೆಯವರು ವಾದಿಯ ಆಸ್ತಿಯ ಉತ್ತರ ದಿಕ್ಕಿಗೆ ವಾದಿಯ ಪರವಾನಿಗೆಯಿಂದ ಸಮೂದಾಯ ಭವನಕ್ಕಾಗಿ 30 x 24 ಕಟ್ಟಡ ಕಟ್ಟಿಕೊಂಡಿದ್ದು, ಈಗ ದಾವಾದಾಸ್ತಿಯ ಉತ್ತರ ದಿಕ್ಕಿನಲ್ಲಿರುವ ಸಮೂದಾಯ ಭವನದಲ್ಲಿ ದಾವಾದಾಸ್ತಿಯ ದಕ್ಷಿಣಕ್ಕಿದ್ದ ಗುತ್ತೆಮ್ಮದೇವಿ ಮೂರ್ತಿಯನ್ನು ಯಾರದೂ ಪರವಾನಿಗೆಯನ್ನು ಕೇಳದೆ ತಮ್ಮದೇ ಆದ ಶ್ರೀ ಚಂದ್ರಗುತ್ತೆಮ್ಮ ಸೇವಾ ಟ್ರಸ್ಟ್ ಅನ್ನುವ ನಾಮದಡಿಯಲ್ಲಿ ಸಮಿತಿಯನ್ನು ರಚಿಸಿ ನೊಂದಾಯಿಸಿಕೊಂಡು ಈಗ ಟ್ರಸ್ಟ ನ ಪದಾಧಿಕಾರಿಗಳಾದ ಪ್ರತಿವಾದಿಯರು ನಾವು ವಾದಿಯ ಸಮೂದಾಯ ಭವನ ಕಟ್ಟಲು ಕೊಟ್ಟಂತಹ ಅಳತೆಯನ್ನು ಮೀರಿ ವಾದಿಯ ಆಸಿ್ತಯ ದಕ್ಷಿಣ ದಿಕ್ಕಿಗೆ ಇನ್ನೂ ಹೆಚ್ಚಿಗೆ ಜಾಗೆ ಇರುವುದಾಗಿ ಹೇಳಿ ವಾದಿಯ ಮನೆಯನ್ನು ನಿರ್ಮಿಸಿಕೊಳ್ಳಲು ಮತ್ತು ವಹಿವಾಟಿಸಲು ಅಡ್ಡಿ ಆತಂಕಪಡಿಸುತ್ತಿದ್ದಾರೆ ಎನ್ನುವುದಾಗಿರುತ್ತದೆ.

8. ವಾದ ಪತ್ರ ಮತ್ತು ಅವರು ಹಾಜರುಪಡಿಸಿರುವ ದಾಖಲಾತಿಗಳನ್ನು ಕುಲಂಕೂಷವಾಗಿ ಪರಿಶೀಲಿಸಲಾಗಿ, ವಾದಿಯ ದಾವಾದಾಸ್ತಿಯು ನಿರ್ಧಿಷ್ಟ ಅಳತೆಯನ್ನು ಹೊಂದಿರುವುದು ಮತ್ತು ಖುಲ್ಲಾ ಜಾಗೆ ಮತ್ತು ಮನೆ ಇರುವುದು ಕಂಡುಬರುತ್ತದೆ. ಸದರ ಪ್ರಕರಣದಲ್ಲಿ ಚಂದ್ರಗುತ್ತೆಮ್ಮ ದೇವಸ್ಥಾನವು ದೇವಸ್ಥಾನ್ನೊಳಗೊಂಡು ಎಷ್ಟು ಭೂ ವಿಸ್ತೀರ್ಣವನ್ನು ಹೊಂದಿರುತ್ತದೆ. ಮತ್ತು ಪುರಸಭೆಯವರು ವಾದಿಯ ಪರವಾನಿಗೆಯೊಂದಿಗೆ ದಾವಾದಾಸ್ತಿಯ ಉತ್ತರ ದಿಕ್ಕಿಗೆ ಸಮೂದಾಯ ಭವನಕ್ಕಾಗಿ 30 x 24 ಜಾಗೆಯಲ್ಲಿ ಕಟ್ಟಡವನ್ನು ಕಟ್ಟಿದ್ದಾರೆಯೇ ಎನ್ನುವ ಬಗ್ಗೆ ತೀರ್ಮಾನವಾಗಬೇಕಾದರೆ ದಾಖಲಾತಿಗಳ ಅವಶ್ಯಕತೆ ಮತ್ತು ಪ್ರಕರಣದ ಸಂಪೂರ್ಣ ವಿಚಾರಣೆ ಅಗತ್ಯ ಇರುತ್ತದೆ. ಯಾವುದೇ ಪ್ರಕರಣದಲ್ಲಿ ನ್ಯಾಯಾಲಯವು ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಬೇಕಾದರೆ ದಾವಾ ಆಸ್ತಿಯು ಮೇಲ್ನೋಟಕ್ಕೆ ವಾದಿಯರ ಸ್ವಾಧೀನದಲ್ಲಿದೆಯೇ ಎಂಬುದನ್ನು ಗಮನಿಸಬೇಕಾಗುತ್ತದೆ. ವಾದಿಯರು ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಿದಾಗ, ದಾವಾದಾಸ್ತಿಯು ಮೇಲ್ನೋಟಕ್ಕೆ ವಾದಿಯ ಕಬ್ಜೆಯಲ್ಲಿರುವುದು ಕಂಡುಬರುತ್ತದೆ ಮತ್ತು ಪುರಸಭೆಯವರು ನೀಡಿದ ವಾಜಪೇಯಿ ನಗರ ವಸತಿ ಯೋಜನೆಯಡಿಲ್ಲಿ ನೀಡಿದ ಮನೆ ಮಂಜೂರಾತಿ ಪತ್ರವನ್ನು ಮತ್ತು ರಿಜನಲ್ ಡೈರೆಕ್ಟರ ಇವರು ನೀಡಿದ ಪತ್ರವನ್ನು ಪರಿಶೀಲಿಸಿದಾಗ ವಾದಿಯು ತನ್ನ ಆಸ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡುವುದು ಕಂಡುಬರುತ್ತದೆ. ಒಂದು ವೇಳೆ ನ್ಯಾಯಾಲಯದವರು ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಿದರೆ ವಾದಿಗೆ ತುಂಬಲಾರದ ನಷ್ಟ ಹಾಗೂ ಹಾನಿಯುಂಟಾಗುತ್ತದೆ. ವಾದಿಯು ತಾನು ದಾದಾದಾಸ್ತಿಯ ಸ್ವಾಧೀನದಲ್ಲಿ ಇದ್ದೇನೆ

ಅಂತಾ ತೋರಿಸಲು ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ಆದ್ದರಿಂದ ಈ ಮಧ್ಯಂತರ ಅರ್ಜಿ ನಂ.1 ರ ಮೂಲಕ ವಾದಿಯ ದಾವಾದಾಸ್ತಿಯ ಶಾಂತಯುತ ಕಬ್ಜಾ ವಹಿವಾಟಿಗೆ ಮತ್ತು ಕಟ್ಟಡ ನಿರ್ಮಾಣ ಮಾಡಲು ಅಡ್ಡಿ ಆತಂಕ ಪಡಿಸದಂತೆ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡುವುದು ಅವಶ್ಯವಾಗಿರುತ್ತದೆ. ಆದ್ದರಿಂದ ಅಂಶ ನಂ.1 ರಿಂದ 3 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

9. **ಅಂತ ನಂ.4ಃ** ಅಂಶ ನಂ. 1 ರಿಂದ 3 ಕ್ಕೆ ನೀಡಿದ ಕಾರಣ ಹಾಗೂ ಉತ್ತರಕ್ಕೆ ಅನುಗುಣವಾಗಿ ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ**

ಅರ್ಜಿದಾರ/ವಾದಿ ಸಿ.ಪಿ.ಸಿ. ಕ್ರಮಾದೇಶ 39 ನಿಯಮ 1 ಮತ್ತು 2 ರನ್ವಯ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸಿದೆ.

ಪ್ರತಿವಾದಿಯರಾಗಲೀ ಅಥವಾ ಅವರ ತರ್ಫೆ ಯಾರೇ ಆಗಲಿ ವಾದಿಯ ದಾವಾದಾಸ್ತಿಯ ಶಾಂತಯುತ ಕಬ್ಜಾ ವಹಿವಾಟಿಗೆ ಅಡ್ಡಿ ಆತಂಕ ಪಡಿಸದಂತೆ ಪ್ರತಿವಾದಿಯರ ವಿರುದ್ಧ ಏಕತರ್ಫಿ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಿದೆ.

ಖರ್ಚಿಗೆ ಸಂಬಂಧಿಸಿದಂತೆ ಯಾವುದೇ ಆದೇಶ ಇರುವುದಿಲ್ಲ.

(ಶೀಘ್ರಲಿಗಾರನಿಗೆ ನೇರವಾಗಿ ಕಂಪ್ಯೂಟರ ಮೇಲೆ ಉಕ್ತಲೇಖನವನ್ನು ಕೊಟ್ಟು ಅವರಿಂ ಬೆರಳಚ್ಚುಪಡಿಸಿ ಅದನ್ನು ಓದಿ ತಿದ್ದಿ ನಂತರ ನನ್ನ ಸಹಿಯನ್ನು ಹಾಕಿ, ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ದಿನಾಂಕಃ 19-12-2019 ರಂದು ಉಚ್ಚರಿಸಲಾಯಿತು).

**(ಶ್ರೀಮತಿ ಫಕೀರವ್ವ ಕೆಳಗೇರಿ)**
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಹಾನಗಲ್.